# ಕೇಳಿ ತಿಳಿಯಿರಿ

? ಆಧುನಿಕತೆಯ ಹೆಸರಿನಲ್ಲಿ, ಸ್ವಾತಂತ್ರ್ಯವನ್ನು ಮೆರೆಯುವ ಉತ್ಸಾಹದಲ್ಲಿ ಯುವಜನಾಂಗ ಮೌಲ್ಯಗಳನ್ನು ಕಡೆಗಣಿಸುತ್ತಿರುವುದು ಕಂಡು ಬರುತ್ತದೆ. ವೈಯಕ್ತಿಕ ಸ್ವಾತಂತ್ರ್ಯವು ಮಾನಸಿಕ, ಬೌದ್ಧಿಕ ಸ್ವಾತಂತ್ರ್ಯಗಳ ಕುರುಹು ಎಂದೇ ಇವರ ವಾದ. ಯಾವುದೇ ಶಿಸ್ತು, ಕಟ್ಟಳೆ ಇವರಿಗೆ ಅಪ್ರಿಯ. ಇದು ವ್ಯಕ್ತಿಯ ವಿಕಾಸಕ್ಕೆ ಹೇಗೆ ಮಾರಕ ಎಂದು ತಿಳಿಸುವಿರಾ?

ಸ್ವಾತಂತ್ರ್ಯಕ್ಕೂ ಸ್ವಚ್ಛಂದತೆಗೂ ತುಂಬ ವ್ಯತ್ಯಾಸವಿದೆ. ಮನಬಂದಂತೆ ವರ್ತಿಸುವುದು ಗುಲಾಮತನ—ಇದು ಇಂದ್ರಿಯ ಮನಸ್ಸುಗಳಿಗೆ ದಾಸನಾಗಿರುವುದು. ಸ್ವಾತಂತ್ರ್ಯದ ಎರಡು ಮುಖ್ಯ ಲಕ್ಷಣಗಳು: ೧. ವೈಯಕ್ತಿಕ ಜವಾಬ್ದಾರಿ ಮತ್ತು ೨. ಇತರರ ಸ್ವಾತಂತ್ರ್ಯವನ್ನು ಗೌರವಿಸುವುದು.

ವ್ಯಕ್ತಿಸ್ವಾತಂತ್ರ್ಯವುಳ್ಳವನು ತನ್ನ ಕ್ರಿಯೆಗಳಿಗೆ ತಾನೇ ಜವಾಬ್ದಾರನಾಗಿರುತ್ತಾನೆ. ತನ್ನ ತಪ್ಪನ್ನು ಇತರರ ಮೇಲೆ ಹೊರಿಸುವುದಿಲ್ಲ. ತನ್ನ ಈಗಿನ ಸ್ಥಿತಿಗೆ ಇತರರನ್ನು ದೂಷಿಸುವುದಿಲ್ಲ, ತಂದೆ ತಾಯಿಗಳನ್ನೂ ದೂರುವುದಿಲ್ಲ, ಪರಿಸ್ಥಿತಿಯನ್ನು ಹಳಿಯುವುದಿಲ್ಲ. ಪರಾವಲಂಬನೆಯ ಮನೋಭಾವವುಳ್ಳವರು ಮಾತ್ರವೇ ಇತರರನ್ನು ದೂಷಿಸುತ್ತಾರೆ. ನಿಜವಾದ ಸ್ವಾತಂತ್ರ್ಯ ಪ್ರಜ್ಞೆಯುಳ್ಳವನಿಗೆ ಸ್ವಾತಂತ್ರ್ಯದ ಬೆಲೆ ಗೊತ್ತಿರುತ್ತದೆ. ಈ ಪ್ರಪಂಚದಲ್ಲಿ ಸ್ವಾತಂತ್ರ್ಯಕ್ಕಿಂತ ಹೆಚ್ಚು ಮೌಲ್ಯವುಳ್ಳದ್ದು ಮತ್ತಾವುದೂ ಇಲ್ಲ, ಅದರಷ್ಟು ಆನಂದದಾಯಕ ಮತ್ತಾವುದೂ ಇಲ್ಲ. ಆದ್ದರಿಂದ ಅದನ್ನು ಪಡೆದಿರುವವನು ಇತರರ ಸ್ವಾತಂತ್ರ್ಯವನ್ನು ಗೌರವಿಸುತ್ತಾನೆ, ಇತರರ ಸ್ವಾತಂತ್ರ್ಯಕ್ಕೆ ಭಂಗವುಂಟಾಗುವ ರೀತಿಯಲ್ಲಿ ವರ್ತಿಸುವುದಿಲ್ಲ.

ಒಬ್ಬ ವ್ಯಕ್ತಿಯು ಬೀದಿಯಲ್ಲಿ ದೊಣ್ಣೆ ಬೀಸುತ್ತ ಮನಬಂದಂತೆ ಓಡಾಡುತ್ತಿದ್ದ. ಅವನ ದೊಣ್ಣೆ ಮುಂದೆ ಬರುತ್ತಿದ್ದ ವ್ಯಕ್ತಿಯ ಮೂಗಿಗೆ ತಾಗಿತು. ಅವನು ಕೋಪದಿಂದ ರೇಗಾಡಿದ. ಮೊದಲನೆಯ ವ್ಯಕ್ತಿ, "ನಾನು ಸ್ವತಂತ್ರ ದೇಶದವನು, ನನಗೆ ಸ್ವಾತಂತ್ರ್ಯವಿದೆ. ನಾನು ಏನು ಬೇಕಾದರೂ ಮಾಡುತ್ತೇನೆ. ನೀನಾರು ಕೇಳುವುದಕ್ಕೆ?" ಎಂದು ಗದರಿಸಿದ. ಎರಡನೆಯ ವ್ಯಕ್ತಿ "Your freedom ends where my nose begins" (ನಿನ್ನ ಸ್ವಾತಂತ್ರ್ಯವು ನನ್ನ ಮೂಗಿನ ತನಕಷ್ಟೆ) ಎಂದು ಉತ್ತರಿಸಿದ.

ಸ್ವಾತಂತ್ರ್ಯ ಶಿಸ್ತಿನಿಂದ ಬರುವಂತಹುದು. ಮೊದಲು ನಾವು ನೈತಿಕ ಶಿಸ್ತಿಗೆ ನಮ್ಮನ್ನು ಒಳಪಡಿಸಿಕೊಳ್ಳಬೇಕು—ಬಾಹ್ಯ ಒತ್ತಡದಿಂದಲ್ಲ, ಸ್ವಂತ ಇಚ್ಛೆಯಿಂದ. ಇದರ ಮೂಲಕ ನಾವು ಬೆಳೆಯುತ್ತೇವೆ. ಅನಂತರ ಸ್ವತಂತ್ರವಾಗಿ ನಾವು ನೈತಿಕ ಜೀವನವನ್ನು ನಡೆಸುತ್ತೇವೆ. ಆಗ ನೈತಿಕ ಶಿಸ್ತು ಸ್ವಾಭಾವಿಕವಾಗುತ್ತದೆ, ಬಂಧನವಾಗುವುದಿಲ್ಲ. ಉಸಿರಾಟವು ಸ್ವಾಭಾವಿಕ ಕ್ರಿಯೆ. ಉಸಿರಾಡಬೇಕು ಎಂಬುದೇನೂ ನಿಯಮವಲ್ಲ. ಒಂದು ಕಂಬಳಿಹುಳು ತನ್ನ ಸುತ್ತ ಗೂಡನ್ನು ಕಟ್ಟಿಕೊಂಡು ಬೆಳೆಯುತ್ತದೆ. ಅನಂತರ ಗೂಡನ್ನು ಭೇದಿಸಿ ಹೊರಬಂದು ಸ್ವತಂತ್ರವಾಗಿ ಹಾರಾಡುತ್ತದೆ. ಹಾಗೆಯೇ ನಾವು ಸ್ವಾತಂತ್ರ್ಯವನ್ನು ಅನುಭವಿಸಬೇಕಾದರೆ ಶಿಸ್ತಿನ ಗೂಡಿನೊಳಗೆ ಬೆಳೆಯಬೇಕು. ಆದರೆ ಅಲ್ಲಿಯೇ ಉಳಿಯಬಾರದು. ಎಲ್ಲ ನಿಯಮ ಗಳನ್ನು ಮೀರಿ ಹೋಗುವುದೇ ಜೀವನದ ಪರಮೋಚ್ಚ ಆದರ್ಶ.

? ಸಮಾಜಸೇವೆಯನ್ನು ಮಾಡುವ ಉದ್ದೇಶದಿಂದ ಹೊರಟರೆ ಹಳ್ಳಿಗಳಲ್ಲಿ, ಗ್ರಾಮಗಳಲ್ಲಿ, ಅಷ್ಟೇ ಏಕೆ ಶಾಲಾಕಾಲೇಜುಗಳಲ್ಲೂ ರಾಜಕೀಯ ಒತ್ತಡಗಳನ್ನು ತರುತ್ತಾರೆ. ಜನಸಾಮಾನ್ಯರೂ ಕೂಡ ಇತ್ತೀಚಿನ ದಿನಗಳಲ್ಲಿ ಉಚಿತವಾಗಿ ಸೇವೆ ಮಾಡಿಸಿಕೊಳ್ಳಲು ಬಯಸಿ ತಾವು ಮನೆಯಲ್ಲೇ ಕುಳಿತಿರುತ್ತಾರೆ. ಹಳ್ಳಿಯ ಕೆರೆಯ ಹೂಳೆತ್ತುವುದು, ಕೊಳಚೆ ನಿರ್ಮೂಲನೆ ಇವೆಲ್ಲ ಪರರ ಕೆಲಸವೆಂದೇ ಇವರ ಭಾವನೆ. ಇಂತಹ ಸನ್ನಿವೇಶದಲ್ಲಿ ಸೇವೆಯ ಉನ್ನತ ಆದರ್ಶವನ್ನು ಕಾಪಾಡುವುದು ಹೇಗೆ?

? ಹಸಿದವರಿಗೆ ಆಹಾರವೀಯುವುದು ಒಂದು ಸೇವೆಯಾದರೆ, ತಮ್ಮ ಆಹಾರವನ್ನು ತಾವೇ ಸಂಪಾದಿಸಿಕೊಳ್ಳುವ ಶಕ್ತಿ ಸಾಮರ್ಥ್ಯವನ್ನು ಅವರಿಗೆ ನೀಡುವುದು ಇನ್ನೂ ದೊಡ್ಡ ಸೇವೆ. ಸೇವೆಯ ಮೂಲಕ ಜನರನ್ನು ಸೋಮಾರಿಗಳನ್ನಾಗಿ ಮಾಡುವುದು ಯಥಾರ್ಥ ಸೇವೆಯಲ್ಲ. ಅದು ನೀರಿನಲ್ಲಿರುವ ಮೀನುಗಳನ್ನು ಮರದ ಮೇಲೆ ಬಿಡುತ್ತಿದ್ದ ಮಂಗನ ಸೇವೆಯಂತಾಗುತ್ತದೆ.

ಸೇವಾದರ್ಶದಿಂದ ಸ್ಫೂರ್ತಿಗೊಂಡವನು ಯಾವುದೇ ಅಡೆತಡೆಗಳನ್ನೂ ಲೆಕ್ಕಿಸುವುದಿಲ್ಲ. ಸೇವೆಗೆ ಅನೇಕ ಅವಕಾಶಗಳಿರುತ್ತವೆ. ಸೇವೆಯನ್ನು ಮಾಡಲು ಯಾರನ್ನೂ ಹುಡುಕಿಕೊಂಡು ಹೋಗಬೇಕಾಗಿಲ್ಲ. ತಾನಿರುವಲ್ಲೇ ದೊರೆಯುವ ಅವಕಾಶಗಳನ್ನೆಲ್ಲ ಉಪಯೋಗಿಸಿಕೊಂಡು ಕೈಲಾದ ಸೇವೆಯನ್ನು ಸಲ್ಲಿಸಬಹುದು. ಸೇವೆಯ ಮನೋಭಾವವನ್ನು ನಾವು ಬೆಳೆಸಿಕೊಳ್ಳಬೇಕು. ಒಂದು ಹೂವು ತಾನಿದ್ದಲ್ಲೇ ಇದ್ದುಕೊಂಡು ಸುಗಂಧವನ್ನು ಹರಡುವ ಮೂಲಕ ಸೇವೆ ಸಲ್ಲಿಸುತ್ತದೆ. ಸುಂದರವಾಗಿ ಪೂರ್ಣವಾಗಿ ಅರಳುವುದಷ್ಟೇ ಅದು ಮಾಡಬೇಕಾಗಿರುವ ಕೆಲಸ. ಹಾಗೆಯೇ ನಮ್ಮ ವ್ಯಕ್ತಿತ್ವವೂ ಅರಳಲಿ. ಆಗ ಸೇವೆಯ ಅವಕಾಶಗಳು ನಮ್ಮ ಸುತ್ತಲೂ ತಮಗೆ ತಾವೇ ಗೋಚರವಾಗುತ್ತವೆ.

ಉತ್ತರಗಳನ್ನು ನೀಡಿದವರು : ಸ್ವಾಮಿ ನಿತ್ಯಸ್ಥಾನಂದಜಿ, ಅಧ್ಯಕ್ಷರು, ಶ್ರೀರಾಮಕೃಷ್ಣ ಆಶ್ರಮ, ಮೈಸೂರು